**OS No. 31/2023**
**PW-1**

(ದಿನಾಂಕ 25.01.2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು).

(ಸಾಕ್ಷಿಗೆ ತೆಲುಗು ಭಾಷೆ ಹೊರತುಪಡಿಸಿ ಕನ್ನಡ ಭಾಷೆ ಬರದೇ ಇರುವುದರಿಂದ, ನ್ಯಾಯಾಲಯಕ್ಕೆ ತೆಲುಗು ಭಾಷೆ ಓದಲು ಮತ್ತು ಬರೆಯಲು ಬರುತ್ತಿದ್ದು ಶ್ರೀ. ಜಿ.ಎ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ನ್ಯಾಯಾಲಯವು ಸಾಕ್ಷಿಗೆ ಭಾಷಾಂತರ ಮಾಡಿ ನೀಡಿದ ಉತ್ತರಗಳನ್ನು ಕನ್ನಡದಲ್ಲಿ ಬರೆದುಕೊಂಡಿದ್ದು ಇರುತ್ತದೆ.)

**<u>ಪಾಟೀ ಸವಾಲು ಶ್ರೀ. ಜಿ.ಎ ವಕೀಲರಿಂದಃ</u>**

1. ನಾನು ಕಳೆದ 15 ವರ್ಷದಲ್ಲಿ ಹೆದರಾಬಾದ್ ನಲ್ಲಿ ವಾಸ ಇರುತ್ತೇನೆ. ನಾನು 3 ವರ್ಷಗಳ ಹಿಂದೆ ಜುಟ್ಲಪೂರು ಕ್ಯಾಂಪಿಗೆ ಬಂದಿರುತ್ತೇನೆ. ಶ್ರೀನಿವಾಸ್ ತಂದೆ ರಾಮರಾವ್ ಜುಟ್ಲಪೂರು ಕ್ಯಾಂಪಿನಲ್ಲಿ ಮನೆ ಕಟ್ಟುತ್ತಿರುವ ವಿಷಯ ನನಗೆ ಅವರೇ ತಿಳಿಸಿರುತ್ತಾರೆ. ನನ್ನ ಸಹೋದರ ಶ್ರೀನಿವಾಸ ಹೇಳಿಕೆಯ ಮೇರೆಗೆ ನಾನು ಈ ದಾವೆ ಸಲ್ಲಿಸಿರುತ್ತೇನೆ. ನನ್ನ ಸಹೋದರ ಶ್ರೀನಿವಾಸ ಮತ್ತು ಪ್ರತಿವಾದಿಯರ ಮಧ್ಯ ಸಾಕಷ್ಟು ಪ್ರಕರಣಗಳು ಬಾಕಿ ಇವೆ ಅಂದರೆ ಸರಿ.

2. 1 ನೇ ಪ್ರತಿವಾದಿ ನನ್ನ ಸೋದರ ಮಾವ. 2 ನೇ ಪ್ರತಿವಾದಿ ನನ್ನ ಇನ್ನೊಬ್ಬ ಸಹೋದರ ಮಾವನ ಹೆಂಡತಿ. 3 ನೇ ಪ್ರತಿವಾದಿ ದೊಡ್ಡ ಸೋದರ ಮಾವನ ಮಗಳು. 4 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮಗ ಅಂದರೆ ಸರಿ. 5 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಮಗ ಅಂದರೆ ಸರಿ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಗುಡಿಸಲು ನಿರ್ಮಾಣ ಮಾಡಿ ವಾಸ ಇರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿ ಬೇರೆ ಕಡೆ ಗುಡಿಸಲು ಹಾಕಿಕೊಂಡು ವಾಸ ಇರುವುದಾಗಿ ಹೇಳುತ್ತಾರೆ. 4 ನೇ ಪ್ರತಿವಾದಿ ತನ್ನ ಗುಡಿಸಲು ತೆಗೆದು, ಮನೆ ಕಟ್ಟಿಸುತ್ತಿದ್ದಾನೆ ಅಂದರೆ ಸರಿ. 4 ನೇ ಪ್ರತಿವಾದಿಗೆ ಸೇರಿದ ಗುಡಿಸಲು ಸುಮಾರು 30 ವರ್ಷಗಳಿಂದ ಇದೆ. ಜಮೀನು ಸರ್ವೆ ನಂ. 14 ರಲ್ಲಿ 4 ನೇ ಪ್ರತಿವಾದಿಗೆ ಸೇರಿದ ಗೋಡಂ ಇದೆ. 4 ನೇ ಪ್ರತಿವಾದಿಯ ಮನೆ ಮತ್ತು ಗೋಡಂ ಒಂದೇ ಲೈನ್ ನಲ್ಲಿ ಇವೆ ಅಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಪ್ರತಿವಾದಿಯರಿಂದ 5 ಎಕರೆ ಜಮೀನು ಖರೀದಿಸಿರುತ್ತೇನೆ

ಎಂದು ಹೇಳುತ್ತಾರೆ. ನಾನು ಜಮೀನು 1980 ರಲ್ಲಿ ಜಮೀನು ಖರೀದಿ ಮಾಡಿರುತ್ತೇನೆ. ಸದರಿ ಜಮೀನು ನನ್ನ ಸಹೋದರ ಶ್ರೀನಿವಾಸ ತಂದೆ ರಾಮರಾವ್ ಸ್ವಾಧೀನ ಹೊಂದಿ ಕಬ್ಜ ವಹಿವಾಟು ಮಾಡುತ್ತಿದ್ದಾನೆ. ನನಗೆ ಸೇರಿದ ಎಲ್ಲ ಆಸ್ತಿಗಳನ್ನು ನನ್ನ ಸಹೋದರ ಶ್ರೀನಿವಾಸ ನೋಡಿಕೊಳ್ಳುತ್ತಾನೆ. ನಾನು 2 ನೇ ಪ್ರತಿವಾದಿಯ ಗಂಡನಿಂದ 5 ಎಕರೆ ಜಮೀನು ಖರೀದಿ ಮಾಡಿರುತ್ತೇನೆ. 5 ಎಕರೆ ಕ್ಷೇತ್ರ ನನ್ನ ಹೆಸರಿನಲ್ಲಿ ಪಹಣಿ ಪತ್ರಿಕೆಗಳಲ್ಲಿ ಬಂದಿರುತ್ತವೆ ನನಗೆ 5 ಎಕರೆ ಮಾರಾಟ ಮಾಡಿದ ನಂತರ ಜಮೀನು ಸರ್ವೆ ನಂ. 14 ರಲ್ಲಿ 2 ನೇ ಪ್ರತಿವಾದ ಗಂಡನಿಗೆ 1 ಎಕರೆ 17 ಗುಂಟೆ ಜಮೀನು ಉಳಿದಿರುತ್ತದೆ. ನಾನು 5 ಎಕರೆ ಜಮೀನು ಖರೀದಿ ಮಾಡಿದ್ದರೂ ನನ್ನ ಹೆಸರು ಪಹಣಿ ಪತ್ರಿಕೆಯಲ್ಲಿ 6 ಎಕರೆ 17 ಗುಂಟೆ ನಮೂದು ಆಗಿರುತ್ತದೆ ಅಂದರೆ ಸರಿ. ನನ್ನ ಹೆಸರಿನಲ್ಲಿ 6 ಎಕರೆ 17 ಗುಂಟೆ ವರ್ಗಾವಣೆ ಆದೇಶದ ಆಗಿರುವ. 2 ನೇ ಪ್ರತಿವಾದಿಯ ಗಂಡ ಸಹಾಯಕ ಆಯುಕ್ತರ ಕಛೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದ ಅಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ನಾನು 6 ಎಕರೆ 17 ಗುಂಟೆ ಜಮೀನು ಕಂದಾಯ ಅಧಿಕಾರಿಗಳು ನನಗೆ ಹೆಸರಿನಲ್ಲಿ ವರ್ಗಾವಣೆ ಮಾಡಿದ್ದರೂ ಎಂಬ ಪ್ರತಿಪಾದನೆ ಮಾಡಿದ್ದೆ ಅಂದರೆ ಸರಿಯಲ್ಲ. ಸಹಾಯಕ ಆಯುಕ್ತರೊಂದಿಗೆ ಮೀಲಾಪೆಯಾಗಿ ಸದರಿ ಮೇಲ್ಮನವಿ ವಜಾಗೊಳಿಸಿರುತ್ತೇವೆ ಅಂದರೆ ಸರಿಯಲ್ಲ. ಸಹಾಯಕ ಆಯುಕ್ತರ ಕಛೇರಿಯ ವಿರುದ್ಧ, 2 ನೇ ಪ್ರತಿವಾದಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದ ಅಂದರೆ ನನಗೆ ಗೊತ್ತಿಲ್ಲ. ಸದರಿ ಜಿಲ್ಲಾಧಿಕಾರಿಗಳು ಸಹಾಯಕ ಆಯುಕ್ತರ ಆದೇಶವನ್ನು ತಳ್ಳಿ ಹಾಕಿ ಪ್ರತಿವಾದಿಯರ ಪರವಾಗಿ 1 ಎಕರೆ 17 ಗುಂಟೆ ಜಮೀನು ವರ್ಗಾವಣೆ ಮಾಡುವಂತೆ ಆದೇಶ ಮಾಡಿದ್ದರೂ, ಅದರಂತೆ 2 ನೇ ಪ್ರತಿವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನನಗೆ ಸೇರಿದ ಪ್ರಕರಣಗಳು ನನ್ನ ತಮ್ಮ ಶ್ರೀನಿವಾಸ್ ನೋಡಿಕೊಂಡು ಹೋಗುತ್ತಾನೆ ಅಂದರೆ ಸರಿ. ಜಿಲ್ಲಾಧಿಕಾರಿಗಳ ಆದೇಶದ ನಂತರ ನಮ್ಮ ಮತ್ತು ಪ್ರತಿವಾದಿಯರ ಮಧ್ಯ ವೈಮನಸು ಇದೆ ಅಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನು ಕ್ಷೇತ್ರ 1 ಎಕರೆ 17 ಗುಂಟೆ ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲೆಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

3. ನನ್ನ ಜಮೀನು ಮತ್ತು ಪ್ರತಿವಾದಿಯರ ಜಮೀನುಗಳ ಮಧ್ಯ ರಸ್ತೆ ಇದೆ ಅಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಫೊಟೊ ತೋರಿಸಿ ಅದರಲ್ಲಿ 4 ನೇ ಪ್ರತಿವಾದಿ ಕಟ್ಟಿದ ಗೋಡಂ ಮತ್ತು ಅದರ ಪಕ್ಕದಲ್ಲಿ ರಸ್ತೆ ಇದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ರಸ್ತೆ ನನ್ನ ಜಮೀನಿನಲ್ಲಿ ಇದೆ ಎಂದು ಹೇಳುತ್ತಾರೆ. ಸದರಿ ಫೊಟೋದಲ್ಲಿ ಇರುವ ರಸ್ತೆಯನ್ನು ಪ್ರತಿವಾದಿಯರು ತಮ್ಮ ಮನೆಗಳಿಗೆ ಹೋಗಿ ಬರಲು ತಮ್ಮ ಜಮೀನಿನಲ್ಲಿ ನಿರ್ಮಾಣ ಮಾಡಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ರಸ್ತೆ ಇರುವ ಬಗ್ಗೆ ದಾವೆಯಲ್ಲಿ ಬರೆದಿಲ್ಲ. ಸಾಕ್ಷಿ ಮುಂದುವರೆದು ನನ್ನ ಜಮೀನಿನಲ್ಲಿ ಪ್ರತಿವಾಯರು ರಸ್ತೆ ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಸದರಿ ರಸ್ತೆಯನ್ನು ಯಾವ ವರ್ಷದಲ್ಲಿ ನಿರ್ಮಾಣ ಮಾಡಿರುತ್ತಾರೆ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ರಸ್ತೆ ನಿರ್ಮಾಣ ಮಾಡುವಾಗ ನಾವು ತಕರಾರು ಮಾಡಿಲ್ಲ. ರಸ್ತೆಗೆ ಹೊಂದಿಕೊಂಡು ನನ್ನ ಜಮೀನು ಇದೆ ಅಂದರೆ ಸರಿ. ಸಾಕ್ಷಿಗೆ ಇನ್ನೊಂದು ಫೊಟೋ ತೋರಿಸಿ ಗೋಡಂ ಇರುವ ಲೈನ್ ನಲ್ಲಿ 4 ನೇ ಪ್ರತಿವಾದಿ ಮನೆ ಕಟ್ಟುತ್ತಿದ್ದನೆ ಅಂದರೆ ಸರಿ. 4 ನೇ ಪ್ರತಿವಾದಿ ಕಟ್ಟುತ್ತಿರುವ ಮನೆ ಮತ್ತು ನಮ್ಮ ಜಮೀನಿನ ಮಧ್ಯ ರಸ್ತೆ ಇದೆ ಅಂದರೆ ಸಾಕ್ಷಿ ರಸ್ತೆ ಅಲ್ಲ ಅದು ದಾರಿ ಇದ್ದು ನನ್ನ ಜಮೀನಿನಲ್ಲಿ ಇದೆ ಎಂದು ಹೇಳುತ್ತಾರೆ. ಸದರಿ ದಾರಿ ನನ್ನ ಜಮೀನಿನಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. 4 ನೇ ಪ್ರತಿವಾದಿ ಮಾತ್ರ ಮನೆ ಕಟ್ಟುತ್ತಿದ್ದಾನೆ. ಉಳಿದ ಪ್ರತಿವಾದಿಯರು ಯಾವುದೇ ಕಟ್ಟಡ ಮಾಡಿಲ್ಲ ಅಂದರೆ ಸರಿ.

4. ಪ್ರತಿವಾದಿಯರು ತಮ್ಮ ಜಮೀನು 2010 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. 2018-19 ನೇ ಸಾಲಿನಲ್ಲಿ ಆ ಬಗ್ಗೆ ವಿಭಾಗ ಮಾಡಿಕೊಂಡಿರುತ್ತಾರೆ ಅಂದರೆ ಸರಿ. 1980 ರಿಂದ ಪಹಣಿ ಪತ್ರಿಕೆಯಲ್ಲಿ ನನ್ನ ಜಮೀನು 3 ಗುಂಟೆ ಕಡಿಮೆ ಬಂದಿರುತ್ತದೆ. ಆ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. 2006-07 ನೇ ಸಾಲಿನ ಪಹಣಿ ಪತ್ರಿಕೆಯಲ್ಲಿ ಜಮೀನು ಸರ್ವೆ ನಂ. 14/2 ರಲ್ಲಿ ನನ್ನ ಹೆಸರಿನಲ್ಲಿ 5 ಎಕರೆ ಇರುತ್ತದೆ ಅಂದರೆ ಸರಿ. ಸಾಕ್ಷಿಗೆ 2009-10 ನೇ ಸಾಲಿನ ಪಹಣಿ ಪತ್ರಿಕೆ ತೋರಿಸಿ ಅದರಲ್ಲಿ ಜಮೀನು ಸರ್ವೆ ನಂ. 14 ರಲ್ಲಿ ನನ್ನ ಹೆಸರು 4 ಎಕರೆ 37 ಗುಂಟೆ ನಮೂದು ಇರುತ್ತದೆ ಅಂದರೆ ಸರಿ ಎಂದು ಉತ್ತರ ನೀಡಿರುತ್ತಾರೆ. ಸಾಕ್ಷಿಗೆ 2006-07, 2008-09 ಪಹಣಿ ಪತ್ರಿಕೆಗಳನ್ನು ತೋರಿಸಿ ಅದರಲ್ಲಿ

2 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ 1 ಎಕರೆ 17 ಗುಂಟೆ ಇದೆ. 1 ಎಕರೆ 20 ಗುಂಟೆ ಇಲ್ಲ ಅಂದರೆ ಸರಿ ಎಂದು ಉತ್ತರ ನೀಡಿರುತ್ತಾರೆ. ಸದರಿ ಪಹಣಿ ಪತ್ರಿಕೆಗಳನ್ನು ಸಾಕ್ಷಿ ಗುರುತಿಸಿರುವುದರಿಂದ ಅವುಗಳನ್ನು ಕ್ರಮವಾಗಿ ನಿಡಿ.1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿ ಒಂದು ಫೋಟೋ ನೋಡಿ ಗುರುತಿಸಿದ್ದು ಅದನ್ನು ನಿಡಿ.3 ಎಂದು ಗುರುತಿಸಲಾಯಿತು. ನಿಪಿ.18 ರ ದಾಖಲೆ ಆಗುವ ಪೂರ್ವದಲ್ಲಿ ಪಹಣಿ ಪತ್ರಿಕೆಯಲ್ಲಿ ನನಗೆ ಹೆಸರು 4 ಎಕರೆ 37 ಗುಂಟೆ ಬಂದಿರುತ್ತದೆ ಅಂದರೆ ಸರಿ. ನನ್ನ ಹೆಸರು ಪಹಣಿ ಪತ್ರಿಕೆಯಲ್ಲಿ ಕಡಿತಗೊಳಿಸಿದ ನಂತರ ನಾನು ಯಾವುದೇ ಪ್ರಕರಣ ದಾಖಲಿಸಿಲ್ಲ ಆದರೆ ಪ್ರತಿವಾದಿಯರು ತಮ್ಮ ಜಮೀನು ಅಳತೆ ಮಾಡಿಸಿದಾಗ ನನಗೆ ಪಹಣಿ ಪತ್ರಿಕೆಯಲ್ಲಿ ಕಡಿತ ಆಗಿರುವುದು ಗೋತ್ತಾಗಿರುತ್ತದೆ. ಸರ್ವೆ ಇಲಾಖೆಯವರು ನನ್ನ ಮತ್ತು ಪ್ರತಿವಾದಿಯರ ಜಮೀನುಗಳನ್ನು ಅಳತೆ ಮಾಡಿ ನಾನು 5 ಎಕರೆ ಜಮೀನುಗಳಲ್ಲಿ ಸ್ವಾಧೀನ ಹೊಂದಿರುವ ಬಗ್ಗೆ ತಿಳಿಸಿರುತ್ತಾರೆ. ಆ ಬಗ್ಗೆ ನನ್ನ ವಾದ ಪತ್ರದಲ್ಲಿ ಬರೆದಿಲ್ಲ ನನಗೆ ಆ ಬಗ್ಗೆ ಮಾಹಿತಿ ಇದ್ದರೂ ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನಿಪಿ.18 ರ ಪ್ರಕಾರ 2 ನೇ ಪ್ರತಿವಾದಿಗೆ 14 ಗುಂಟೆ ಜಮೀನು ಬಂದಿದ್ದು ಅದರಲ್ಲಿ 1 ಗುಂಟೆ ಪೋಟ್ ಕರಾಬು ಎಂದು ನಮೂದಿಸಿರುತ್ತಾರೆ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ 12 ಗುಂಟೆ ಜಮೀನು ಬಂದಿದ್ದು ಅದರಲ್ಲಿ 1 ಗುಂಟೆ ಪೋಟ್ ಕರಾಬು ಎಂದು ಬರೆದಿರುತ್ತಾರೆ ಅಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ 4 ಗುಂಟೆ ಜಮೀನು ಬಂದಿದ್ದು ಅದರಲ್ಲಿ 1 ಗುಂಟೆ ಪೋಟ್ ಕರಾಬು ಎಂದು ನಮೂದಿಸಿರುತ್ತಾರೆ ಅಂದರೆ ಸರಿಯಲ್ಲ. ಪ್ರತಿವಾದಿ ನಂ. 2, 3 ಮತ್ತು 5 ರ ಭಾಗಕ್ಕೆ ಬಂದ ಜಮೀನು ಚೀಕಲಪರ್ವಿ-ಹೀರೆಕೊಟ್ನೆಕಲ್ ರಸ್ತೆಗೆ ಹೊಂದಿಕೊಂಡು ಇದೆ ಅಂದರೆ ಸರಿ. ಸಾಕ್ಷಿ ಅವರ ಜಮೀನಿನಲ್ಲಿ ಇದೆ ನನ್ನ ಜಮೀನಿಗೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಸದರಿ ರಸ್ತೆ ಪ್ರತಿವಾದಿ 2, 3 ಮತ್ತು 5 ರ ಜಮೀನಿನಲ್ಲಿ ಹಾದು ಹೋಗಿರುವುದರಿಂದ ವಿಭಾಗ ಪತ್ರದಲ್ಲಿ ತಲಾ 1 ಗುಂಟೆ ಪೋಟ್ ಕರಾಬು ಎಂದು ತೋರಿಸಿರುತ್ತಾರೆ ಅಂದರೆ ಸರಿಯಲ್ಲ. ಸದರಿ 3 ಗುಂಟೆ ಜಮೀನು ಪೋಟ್ ಕರಾಬು ಜಮೀನು ತೆಗೆದರೆ ಪ್ರತಿವಾದಿಯರು 1 ಎಕರೆ 17 ಗುಂಟೆ ಜಮೀನು ಉಳಿಯುತ್ತದೆ ಅಂದರೆ ಸರಿಯಲ್ಲ. ಸದರಿ 1 ಎಕರೆ 17 ಗುಂಟೆಯಲ್ಲಿ ಪ್ರತಿವಾದಿಯರು ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಅಂದರೆ ಸರಿಯಲ್ಲ 3 ಗುಂಟೆ ಜಮೀನು ಪ್ರತಿವಾದಿಯರ ಭಾಗಕ್ಕೆ ಬಂದಿಲ್ಲ ಕಾರಣ ವಿಭಾಗ ಪತ್ರದಲ್ಲಿ ತೋರಿಸಿಲ್ಲ ಅಂದರೆ ಸರಿಯಲ್ಲ.

**OS No. 31/2023**
**PW-1**

**ಈ ಹಂತದಲ್ಲಿ ಶ್ರೀ. ಜಿ.ಎ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ಮುಂದುಡಲಾಯಿತು.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

**ಪ್ರ.ದ.ನ್ಯಾದಂ.ಗಳು. ಮಾನ್ವಿ**